ಬಿ.ಆರ್. ಪಾಟೀಲ
ಶಾಸಕರು
ಕರ್ನಾಟಕ ವಿಧಾನ ಸಭೆ,
ಆಳಂದ ಕ್ಷೇತ್ರ, ಕಲಬುರ್ಗಿ ಜಿಲ್ಲೆ

B.R. PATIL
MLA
Karnataka Legislative Assembly
Aland Constituency, Kalaburgi Dist.

2704
ದಿನಾಂಕ; 28-11-23

ಗೆ.
ಸನ್ಮಾನ್ಯ ಶ್ರೀ.ಸಿದ್ದರಾಮಯ್ಯರವರು
ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ. ವಿಧಾನಸೌಧ
ಬೆಂಗಳೂರು.
ಮಾನ್ಯರೇ.

ವಿಷಯ:-ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಯಮಿತ ವತಿಯಿಂದ ಕಾಮಗಾರಿ ಕುಂಠಿತವಾಗಿ, ವಿಳಂಬವಾಗಿರುವ ಬಗ್ಗೆ.

ನಾನು ಈ ಹಿಂದೆ 2013 ರಲ್ಲಿ ಶಾಸಕನಾಗಿದ್ದಾಗ ತಮ್ಮ ನೇತ್ರತ್ವದಲ್ಲಿನ ಸರ್ಕಾರ ಅಭಿವೃದ್ಧಿ ಕಾಮಗಾರಿಗಳಿಗೆ ಸಾಕಷ್ಟು ಅನುದಾನ ನೀಡಿದ್ದಿರಿ. ನಾನು ಕೆಲವು ಕಾಮಗಾರಿಗಳನ್ನು ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಯಮಿತಕ್ಕೆ ನೀಡಿದ್ದು ನಿಜ, ಕಾರಣ ಚುನಾವಣೆ ಹತ್ತಿರ ಬರುತ್ತಿದ್ದ ಸಮಯದಲ್ಲಿ ಬೇರೆ ಸಂಸ್ಥೆಗಳಿಗೆ ಕೊಟ್ಟರೆ ಟೆಂಡರ ಪ್ರಕ್ರಿಯೆ ಮುಗಿಸಿ ಕಾಮಗಾರಿಗಳು ಪ್ರಾರಂಭವಾಗಲಿಕ್ಕೆ ವಿಳಂಬವಾಗುವ ಕಾರಣ ಭೂಸೇನೆ (ಲ್ಯಾಂಡ್ ಆರ್ಮಿ)ಗೆ ಕಾಮಗಾರಿ ಕೊಡಲಾಗಿರುತ್ತದೆ, ಆದರೆ ಇಲ್ಲಿಯವರೆಗೆ ಕಾಮಗಾರಿಗಳು ಮುಗಿದಿಲ್ಲ ಮಾಡಿದ್ದರು ಅರ್ಧಂಬರ್ದ ಕೆಲಸ ಮಾಡಿರುತ್ತಾರೆ. ಮಾಡಿದರೂ ಕಳಪೆ ಕಾಮಗಾರಿಯಾಗಿರುತ್ತದೆ. 2018 ರ ನಂತರ ಬಂದತಹ ಬಿಜೆಪಿ ಸರ್ಕಾರ ಇದರ ಬಗ್ಗೆ ಗಮನ ಹರಿಸಲಿಲ್ಲ.

ಈ ವಿಷಯಕ್ಕೆ ಸಂಬಂದಿಸಿದಂತೆ ಕಳೆದ ಅಧಿವೇಶನದಲ್ಲಿ ಸಂಬಂದಪಟ್ಟ ಸಚಿವರಾದ ಪ್ರಿಯಾಂಕ ಖರ್ಗೆರವರಿಗೆ ಗಮನ ಸೆಳೆಯಲಾಗಿದ್ದು ಆದರೆ ಅವರು ಅನುಪಸ್ಥಿತಿಯಲ್ಲಿ ಸಚಿವರಾದ ಕೃಷ್ಣಭೈರೇಗೌಡರವರು ಉತ್ತರ ಹೇಳುತ್ತಾ ಇಷ್ಟೆಲ್ಲಾಗೊತ್ತಿದ್ದರು ಕಾಮಗಾರಿಗಳನ್ನು ಯಾಕೆ ಕೊಟ್ಟಿದ್ದರಿವೆಂದು ನನಗೆ ವಾದಮಾಡಿ ಆರೋಪ ಮಾಡಿ ನನ್ನ ಮೇಲೆ ಅನುಮಾನ ಬರುವಂತೆ ಆರೋಪ ಮಾಡಿದ್ದಾರೆ, ಇದರ ಅರ್ಥ ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಯಮಿತ ಕಡೆಯಿಂದ ನಾನು ಹಣ ಪಡೆದು ಕೊಟ್ಟಿದ್ದೇನೆಂಬ ಅರ್ಥದಲ್ಲಿ ಸದನದಲ್ಲಿ ಮಾತನಾಡಿದ್ದಾರೆ. ಇದಕ್ಕೆ ನಾನು ಪ್ರತಿಭಟಿಸಿ ನೀವು ನನಗೆ ಗೂಬೆಕೂಡಿಸಲು ಹೇಳುತ್ತಿದ್ದಿರಿ. ಅಂದು ನನಗೆ ಸದನದಲ್ಲಿ ಶಾಸಕರಾದ ಶಿವಲಿಂಗೆಗೌಡರು ಸಹ ಧ್ವನಿಗೂಡಿಸಿದರು. ಸಮಯ ಇತಿಮಿತಿ ಇರುವುದರಿಂದ ಮಾನ್ಯ ಸಭಾಧ್ಯಕ್ಷರು ಬೇರೆ ವಿಷಯಕ್ಕೆ ಹೋದ ಕಾರಣಕ್ಕಾಗಿ ನಾನು ಕೂಡಬೇಕಾಗಿತ್ತು. ಇದೂ ಸದನದಲ್ಲಿ ನಡೆದ ವಿಷಯಗಳು ಎಲ್ಲಾ ಮಾಧ್ಯಮಗಳಲ್ಲಿ ಬಿತ್ತರವಾಗಿರುವ ಕಾರಣ ಈ ಪತ್ರವನ್ನು ಬರೆಯಲೇಬೇಕಾಗಿದೆ.

ಪು.ತಿ.ನೋ.

BANGALORE : #309, Hoysala VIjay Enclave-1, Kalpana Chawla Road, Bhoopsandra, Bangalore -560 094.
Mob.: 94483 44266 Email : mlabrapatil@gmail.com
KALABURGI : #16, "Ganga", Akkamadevi Colony, KHB Layout, Beside High Court,
Kalaburgi - 585 102. Ph.: 08472-264566

asianet ಸುವರ್ಣ ನ್ಯೂಸ್

**ಬಿ.ಆರ್. ಪಾಟೀಲ**
ಶಾಸಕರು
ಕರ್ನಾಟಕ ವಿಧಾನ ಸಭೆ,
ಆಳಂದ ಕ್ಷೇತ್ರ, ಕಲಬುರ್ಗಿ ಜಿಲ್ಲೆ

**B.R. PATIL**
MLA
Karnataka Legislative Assembly
Aland Constituency, Kalaburgi Dist.

2711
ದಿನಾಂಕ; 28-11-23

-೨-

asianet ಸುವರ್ಣ ನ್ಯೂಸ್

ಅಂದು ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರಾದ ಶ್ರೀ.ಪ್ರಿಯಾಂಕ ಖರ್ಗೆರವರು ಈ ಕಾಮಗಾರಿಗಳ ಬಗ್ಗೆ ಗಮನ ವಹಿಸಿ ಪ್ರತ್ಯೇಕವಾಗಿ ಪ್ರಗತಿ ಪರಿಶೀಲನಾ ಸಭೆ ಮಾಡುವುದಾಗಿ ಹೇಳಿದ್ದರು. ಆದರೆ ಕಾರಣಾಂತರಗಳಿಂದ ಸಭೆ ನಡೆದಿಲ್ಲ. ಈಗ ಮತ್ತೇ ಡಿಸಂಬರ್ 4 ರಿಂದ 15 ವರೆಗೆ ಸುವರ್ಣ ಸೌಧ ಬೆಳಗಾವಿಯಲ್ಲಿ ಅಧಿವೇಶನ ನಡೆಯಲಿದೆ. ಈ ಆರೋಪಗಳನ್ನು ಹೊತ್ತು ಸದನಕ್ಕೆ ಬಂದರೆ ಈ ಆರೋಪಗಳನ್ನು ಒಪ್ಪಿಕೊಂಡಂತಾಗುತ್ತದೆ. ಇದು ನೈತಿಕ ದೃಷ್ಟಿಯಿಂದ ಸರಿಯಾ ಅಲ್ಲ, ಆದಕಾರಣ ತಾವು ಇದರ ಬಗ್ಗೆ ತನಿಖೆ ನಡೆಸಿ ಸತ್ಯಾಸತ್ಯತೆಯನ್ನು ಹೊರಗೆ ಬರುವಂತೆ ತನಿಖೆ ಮಾಡಲು ಆದೇಶ ನೀಡಿ ನನ್ನನ್ನು ಆರೋಪದಿಂದ ಮುಕ್ತ ಮಾಡಬೇಕಾಗಿ ಹಾಗೂ ನನ್ನ ಮೇಲಿನ ಈ ಆರೋಪ ಸಾಬಿತಾದರೆ ಇವತ್ತೇ ನನ್ನ ವಿಧಾನ ಸಭೆ ಸದಸ್ಯ ಸ್ಥಾನಕ್ಕೆ ರಾಜಿನಾಮೆ ಕೊಡುವುದಕ್ಕೆ ನಿರ್ಧಾರ ಮಾಡಿದ್ದೇನೆ. ಪಂಚರಾಜ್ಯ ಚುನಾವಣೆ ಇರುವುದಿಂದ ಪಕ್ಷದ ಮೇಲೆ ಪ್ರತಿಕೂಲ ಪರಿಣಾಮ ಬೀರಬಾರದೆಂದು ಈಗ ಈ ಪತ್ರವನ್ನು ಬರೆಯುತ್ತಿದ್ದೇನೆ, ಕಾರಣ ತಾವು ತುರ್ತು ತನಿಖಾ ಆಯೋಗ ರಚಿಸಬೇಕಾಗಿ ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ
ಬಿ.ಆರ್.ಪಾಟೀಲ

೧. ಕಾಮಗಾರಿಗಳ ಪ್ರತಿ ಲಗತ್ತಿಸಲಾಗಿದೆ.
೨. ಸಿ.ಡಿ. ಪ್ರತಿ ಲಗತ್ತಿಸಲಾಗಿದೆ

BANGALORE : #309, Hoysala Vijay Enclave-1, Kalpana Chawla Road, Bhoopsandra, Bangalore -560 094.
Mob.: 94483 44266 Email : mlabrapatil@gmail.com
KALABURGI : #16, “Ganga”, Akkamadevi Colony, KHB Layout, Beside High Court,
Kalaburgi - 585 102. Ph.: 08472-264566